ತ್ತದೆ. ಅಷ್ಟಕ್ಕೆ ಅವಕಾಶ ಕೊಡದಹಾಗೆ ನಡೆದುಕೊಳ್ಳಿಯೆಂದು ಹೇಳಿದ್ದೇನೆ. ಯಾರನ್ನೂ ಹೆದರಿಸಿ ಮಾಡಿಸಬೇಡಿಯೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಾಚಯ್ಯನವರ ಮೇಲೆ ಅಪಾರವಾದ ನಂಬಿಕೆಯನ್ನಿಟ್ಟು ಈ ವಿಷಯವನ್ನು ಇಲ್ಲಿಗೆ ಬಿಡೋಣ. ಕೇಸುಗಳನ್ನು ಹಾಕುವಾಗ ಸತ್ಯ ಅಸತ್ಯತೆಗಳನ್ನು ವಿಮರ್ಶೆ ಮಾಡಿ ಕೇಸುಗಳನ್ನು ಹಾಕಬೇಕು. ಅದರ ಬಗ್ಗೆ ಸರಿಯಾಗಿ ವಿಚಾರ ಮಾಡಲಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಮುಂದೆ ಆಗದಹಾಗೆ ನೋಡಿಕೊಳ್ಳುತ್ತೇನೆ ಎನ್ನುವ ಅಭಿಪ್ರಾಯವನ್ನು ಕೊಟ್ಟಿರುವುದರಿಂದ ಇಲ್ಲಿಗೆ ಈ ವಿಷಯವನ್ನು ನಿಲ್ಲಿಸೋಣ. ಅಧಿಕಾರಿಗಳ ಕುಮ್ಮಕ್ಕಿನಿಂದ ಏನು ಇದು ನಡೆಯುತ್ತಿದೆ ಅದನ್ನು ತಪ್ಪಿಸಿದರೆ ಸರಿಯಾಗಿ ಆಗಬಹುದು, ನಿಮ್ಮ ಅಧಿಕಾರಿಗಳಿಗೆ ಆ ರೀತಿ ಸೂಚನೆ ಕೊಡಿರಿ.

ಶ್ರೀ ಬಿ. ರಾಚಯ್ಯ.—ನಮ್ಮ ಅಧಿಕಾರಿಗಳ ಬಗ್ಗೆ ಅನುಮಾನಪಡಬೇಕಾಗಿಲ್ಲ. ಹೇಳುವುದರಲ್ಲಿ ಕಡಿಮೆ ಇದೆ, ಮಾಡುವುದರಲ್ಲಿ ಜಾಸ್ತಿ ಮಾಡಿದ್ದೇವೆ ಪಕ್ಷಪಾತವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಮುಂದೆ ಇಂತಹ ಘಟನೆಗಳು ಆಗದೇ ಇರುವುದಕ್ಕೆ ಎಲ್ಲರೂ ಸಹಕರಿಸಬೇಕು. ಯಾವ ಪಕ್ಷಪಾತವಿಲ್ಲದೆ ಯಾರೇ ತಪ್ಪುಮಾಡಿದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಈಗ ಸಭೆಯನ್ನು ಮುಂದೂಡಿ ಮಧ್ಯಾಹ್ನ ಪುನಃ ೨ ಗಂಟೆ ೪೫ ನಿಮಿಷಗಳಿಗೆ ಸೇರುವುದು.

(ಸಭೆಯನ್ನು ೧ ಗಂಟೆ ೫೫ ನಿಮಿಷಗಳಿಗೆ ಮುಂದೂಡಿ ಪುನಃ ೨ ಗಂಟೆ ೪೫ ನಿಮಿಷಗಳಿಗೆ ಸೇರಲು ನಿಶ್ಚಯಿಸಿತು).

೨-೦೦ ಪಿ. ಎಂ.

(ಸಭೆಯು ಪುನಃ ೨-೪೫ ಘಂಟೆಗೆ ಸಮಾವೇಶಗೊಂಡಿತು)

ಅಧ್ಯಕ್ಷರು (ಬಿ. ಜಿ. ಬಣಕಾರ್)ರವರು ಪೀಠವನ್ನಲಂಕರಿಸಿದ್ದರು.

ಮಂತ್ರಿಯವರಾದ ಶ್ರೀ ವೈ. ಕೆ. ರಾಮಯ್ಯನವರಿಂದ ವೈಯಕ್ತಿಕ ಹೇಳಿಕೆ

ಶ್ರೀ ವೈ ಕೆ. ರಾಮಯ್ಯ.— ಬೆಳಿಗ್ಗೆ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಐತಿಹಾಸಿಕ ಘಟನೆಗಳ ಬಗ್ಗೆ ಚರ್ಚೆಯಾಗತಕ್ಕ ಸಮಯದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ತುಮಕೂರು ಜಿಲ್ಲೆಯಲ್ಲಿ ನಡೆದಂತಹ ಘಟನೆಯನ್ನು ಸಭೆಯ ಗಮನಕ್ಕೆ ತಂದು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಇದನ್ನು ರಾಮಯ್ಯನವರೇ ಮಾಡಿಸಿದ್ದಾರೆಂದು ಹೇಳುವುದಿಲ್ಲ ಆದರೂ ವಿಚಾರಿಸಿ ಎಂಬದಾಗಿ ಹೇಳಿದ್ದಾರೆ ಈಗ ನಾನು ಇದನ್ನು ವಿಚಾರಿಸಿದ್ದೇನೆ. ನಿಮ್ಮ ಅವಗಾಲ್ಕವಾದ ಒಂದು ನಿಮಿಷದ ಒಂದು ನಿಮಿಷದ ಕಾಲಾವಕಾಶವನ್ನು ಈ ಬಗ್ಗೆ ನಾನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನದಲ್ಲಿ ಒಮ್ಮೊಮ್ಮೆ ಬರುವಂತಹ ಅನೇಕ ವಿಷಯಗಳು ಹಿನ್ನಲೆ ಗೊತ್ತಿಲ್ಲದೆ ಎಷ್ಟೋ ಬರುತ್ತವೆ. ಇದರಲ್ಲಿ ಎಷ್ಟೋ ತಮಾಷೆ ಇರುತ್ತದೆಂಬುದರ ಬಗ್ಗೆ ಒಂದೆರಡು ಅಂಶಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಪಕ್ಷದ ನಾಯಕರು ಹೇಳಿದ ಮಾತಿಗೂ ಈ ಘಟನೆಗೂ ರಾಜಕೀಯ ಸಂಬಂಧ ಇಲ್ಲ. ಅಲ್ಲಿ ೧೯೮೩ನೇ ಇಸವಿಯಿಂದ ಜಗಳ ಊರಿನವರಿಗೂ ಅಲ್ಲಿರುವಂತಹ ಸಾಹುಕಾರರಿಗೂ ನಡೆಯುತ್ತಿದೆ. ಇದರಲ್ಲಿ ಯಾವ ರಾಜಕೀಯದ ಹಿನ್ನಲೆಯೂ ಇಲ್ಲ ಎನ್ನುವುದಕ್ಕೆ ವಿಷಯವನ್ನು ತಮ್ಮ ಗಮನಕ್ಕೆ ತಂದರೆ ತಾವೇ ಒಪ್ಪಿಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಮಂಡ್ಯ ಜಿಲ್ಲೆಯಾ ಲೋಕ ಸಭಾ ಸದಸ್ಯರು ಯಾವ ಪಕ್ಷದವರು ಎಂದರೆ ಜನತಾ ಪಕ್ಷದವರು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಈಗ ರಾಜ್ಯಪಾಲರ ಭಾಷಣದ ಮೇಲೆ ಅದಂತಹ ಚರ್ಚೆಗೆ ಉತ್ತರ ನೀಡಿ ಆಗಿದೆ. ಅದು ಮುಗಿದು ಹೋಗಿದೆ ಎಂದು ಕಾಣುತ್ತದೆ. ಇದು ಮುಗಿದು ಹೋದ ಮೇಲೆ ಶ್ರೀಮಾನ್ ರಾಮಯ್ಯನವರು ಹೇಳಿಕೆಯೊಂದನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು.—ಆದರ ಬಗ್ಗೆ ಅಲ್ಲ, ಬೆಳಿಗ್ಗೆ ನಡೆದಂತಹ ಗಮನ ಸೆಳೆಯುವ ಸೂಚನೆ ಮೇಲೆ...

ಶ್ರೀ ಬಿ. ಬಸವಲಿಂಗಪ್ಪ.—ಅದೂ ಕೂಡ ಮುಗಿದು ಹೋಗಿದೆ. ಆದು ಮುಗಿದು ಹೋದ ಮೇಲೆ ಇವರು ಯಾವ ನಿಯಮಾವಳಿಗಳ ಪ್ರಕಾರ ಹೇಳುತ್ತಿದ್ದಾರೆ ? ಮಾನ್ಯ ಮಂತ್ರಿಗಳು ಹೇಳುವುದಕ್ಕೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಸಂಪ್ರದಾಯದ ಪ್ರಕಾರ ನಾನು ಮಾತನಾಡುತ್ತಿದ್ದೇನೆ. ನಮ್ಮಲ್ಲಿರತಕ್ಕ ನಿಯಮಾವಳಿಗಳಲ್ಲಿ ಯಾವ ಕಲಮಿನ ಪ್ರಕಾರ ಅವರು ಮಾತನಾಡುತ್ತಿದ್ದಾರೆ ? ಯಾವ ಕಲಮಿನ ಪ್ರಕಾರ ತಾವು ಅವರಿಗೆ ಅವಕಾಶ ಕೊಟ್ಟಿದ್ದೀರಿ ?

ಅಧ್ಯಕ್ಷರು.—ಏನಾದರೂ ಪರ್ಸನಲ್ ಎಕ್ಸಪ್ಲನೇಷನ್ ಇದ್ದರೆ ಅಷ್ಟನ್ನೇ ಹೇಳಿಬಿಡಿ.

ಶ್ರೀ ವೈ. ಕೆ. ರಾಮಯ್ಯ.—ನಾನು ಯಾವತ್ತೂ ಪದೇ ಪದೇ ಎದ್ದು ನಿಂತು ಮಾತನಾಡುವವನಲ್ಲ. ವಿಚಾರ ತಿಳಿಸಬೇಕಾಗಿದೆ. ಒಂದು ನಿಮಿಷ ನನಗೆ ಕಾಲಾವಕಾಶವನ್ನು ತಾವು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಸುಲಭ ಮಾಡುವುದಕ್ಕಾಗಿ ಒಂದು ಸಲಹೆ ಮಾಡುತ್ತಿದ್ದೇನೆ. ಅವರೂ ಕೂಡ ಇದನ್ನು ಒಪ್ಪಿದ್ದಾರೆ ಎಂದು ಕಾಣುತ್ತದೆ, ಶ್ರೀಮಾನ್ ರಾಮಯ್ಯನವರು ಇದನ್ನು ಮಾಡಿಸಿದ್ದಾರೆ ಎನ್ನುವ ಅಭಿಪ್ರಾಯದಿಂದ ನಾನು ಹೇಳಲಿಲ್ಲ. ಹಾಗಿದ್ದರೂ ಆ ರೀತಿಯ ಆಪಾದನೆಗಳು ಬರುತ್ತವೆ, ವಿಚಾರಣೆ ಮಾಡಿಸಿ ಎಂಬುದಾಗಿ ಹೇಳಿದ್ದೇನೆ. ನಿಮ್ಮ ಮೇಲೆ ಬಂದಾಗ ನೀವು ವಿಚಾರಣೆ ಮಾಡಿಸಿ. ನಮ್ಮ ಮೇಲೆ ಬಂದಾಗ ನಾವು ವಿಚಾರಣೆ ಮಾಡಿಸುತ್ತೇವೆ. ನಾವೇನಾದರೂ ಪರ್ಸನಲ್ ಆಗಿ ಆಪಾದನೆಗಳನ್ನು ಮಾಡಿದಾಗ ನೀವು ಆದಕ್ಕೆ ಪ್ರತಿಯಾಗಿ ಪರ್ಸನಲ್ ಎಕ್ಸಪ್ಲನೇಷನ್ ಕೊಡುವುದಕ್ಕೆ ಬರುತ್ತದೆ. ಆದರೆ ಈಗ ಆ ಪ್ರಶ್ನೆ ಇಲ್ಲ. ಆದ್ದರಿಂದ ಇದನ್ನು ಹೆಚ್ಚಿಗೆ ಬೆಳಿಸುವುದು ಬೇಡ. ಮುಗಿಸುವುದು ಬಳ್ಳಿಯದು.

ಶ್ರೀ ವೈ. ಕೆ. ರಾಮಯ್ಯ.— ಒಂದೇ ನಿಮಿಷ ನಾನು ಹೇಳಿ ಮುಗಿಸುತ್ತೇನೆ. ಅವರು ಮಾತನಾಡುವಾಗ ಆ ತರಹ ನನಗೆ ಬರೆದು ತಿಳಿಸಿದ್ದಾರೆ ಎಂದು ಹೇಳಿದರು. ವಿಚಾರಿಸಿ ಎಂದು ಹೇಳಿದ್ದಾರೆ ವಿಚಾರಿಸಿದ್ದೇನೆ. ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ಇಂತಹ ವಿಷಯಗಳ ಮೇಲೆ ಚರ್ಚೆಯಾಗಬೇಕು. ನಾನೇನು ಹತ್ತತ್ತು ಸಾರಿ ಎದ್ದು ನಿಂತು ಮಾತನಾಡುವವನಲ್ಲ. ದಯವಾಡಿ ಕ್ಷಮಿಸಿ. ಒಂದು ನಿಮಿಷ ಈ ಸಭೆಯ ಅಮೂಲ್ಯವಾದ ಕಾಲಾವಕಾಶವನ್ನು ತಾವು ನನಗೆ ಕೊಡಬೇಕು. ಈ ಸದನದಲ್ಲಿ.....

ಶ್ರೀ ಬಿ. ಬಸವಲಿಂಗಪ್ಪ —ಬಂಗಾರಪ್ಪನವರು ಉತ್ತರ ಕೊಟ್ಟರು ಎಂದು ತಿಳಿದುಕೊಂಡೆ. ಅವರು ಮಾತನಾಡಿದ ಧಾಟಿ ಆ ರೀತಿ ಇತ್ತು. ಅಂದಾಗ ಅವರಿಗೆ ಯಾವ ಕಲಂ ಪ್ರಕಾರ ಮಾತನಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ ?

ಅಧ್ಯಕ್ಷರು.—ನಿಮ್ಮ ಹೆಸರನ್ನು ತೆಗೆದುಕೊಂಡಿಲ್ಲವೆಂದು ಬಂಗಾರಪ್ಪನವರು ಹೇಳುತ್ತಾರೆ.

ಶ್ರೀ ವೈ. ಕೆ. ರಾಮಯ್ಯ.—ನನ್ನ ಹೆಸರನ್ನು ಹೇಳಿದ್ದಾರೆ, ಅದಕ್ಕೆ ಬಂತು ಈ ಪ್ರಸ್ತಾಪ. ರಾಮಯ್ಯನವರು ಮಾಡಿಸಿದ್ದಾರೆಂದು ಬಂದಿದೆ, ಆದುದರಿಂದ ನಾನು ಅವರ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ. ಜನತಾ ಪಕ್ಷದ ಯುವಕ ಸಭೆಯ ಸದಸ್ಯರು ಆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನನಗೆ ಕೇಳಿ ಕಳುಹಿಸಿದ್ದಾರೆ. ಯಾರು ಹೊಡೆಸಿಕೊಂಡಿದ್ದೇನೆಂದು ಹೇಳುತ್ತಾನೆ ಆತ ನಮ್ಮ ಪಕ್ಷದವನು, ಆ ವಿಷಯವನ್ನು ಶೀರ್ಮಾನ ಮಾಡಿ ಎಂದು ನನಗೆ ಹೇಳಿದ್ದಾರೆ. ಆದರೆ ಹೊಡೆಸಿಕೊಂಡವರು ಎಲ್ಲರೂ ಕಾಂಗ್ರೆಸಿನವರು, ಹೊಡೆದವರು ಜನತಾ ಪಕ್ಷದವರು ಎಂದು ಇವರು ಹೇಳಿದ್ದಾರೆ. ಇದು ಒಂದು ನಿದರ್ಶನ. ಬಂಗಾರಪ್ಪನವರನ್ನು ಕರೆದು ಕೇಳಿ ಶಂಕರೇಗೌಡರು ಸ್ಥಳಕ್ಕೆ ಹೋಗಿ ಹುಡುಗನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ನನಗೆ ಹೇಳಿ ಕಳುಹಿಸಿದ್ದಾರೆ ಇದಕ್ಕೆ ರಾಜಕೀಯ ಹಿನ್ನೆಲೆಗಿಂತ ಸಾಮಾಜಿಕ ಹಿನ್ನೆಲೆ ಇದೆ. ಇದಕ್ಕೆಲ್ಲಾ ಲೋಹಿಯ ಅವರು ಕಾರಣವೆಂದು ಕಾಣುತ್ತದೆ. ಏಕೆಂದರೆ ಅವರು ಒಬ್ಬರೇ ಅಲ್ಲಿ ಸಾಹುಕಾರರು. ಎಲ್ಲರಿಗೂ ಹಣ ಸಾಲ ಕೊಟ್ಟುಕೊಂಡು ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಸಮಾಜ ಬದಲಾವಣೆ ಆಗುತ್ತಿದೆ, ಸರ್ಕಾರದ ಜವೀನನ್ನು ಅವರು ಒತ್ತರಿಸಿಕೊಂಡಿದ್ದಾರೆ. ಇದರಲ್ಲಿ ಯಾರದ್ದು ತಪ್ಪಿದ ಎಂದು ಗೊತ್ತಿಲ್ಲ. ಹೀಗಾಗಿ ಸರ್ಕಾರಿ ಜವೀನನ್ನು ಬಿಡಿಸಿಕೊಳ್ಳುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಈ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಹೇಳುತ್ತೇನೆ, ನನಗೂ ಆ ಘಟನೆಗೂ ಸಂಬಂಧ ಇಲ್ಲ,

ಆ ವಿಷಯಕ್ಕೂ ನನಗೂ ಸಂಬಂಧ ಇಲ್ಲ. ಆ ಊರಿನಲ್ಲಿ ತುಂಬಾ ಕಡು ಬಡವರಿದ್ದಾರೆ, ಅವರಲ್ಲಿ ಸಂಮಾರು ಹತ್ತು ಜನ ಶಾಸಕರ ಭವನದ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರುಗಳ ವಂಧ್ಯದಲ್ಲಿ ಆ ಸಾಹುಕಾರ ಇದ್ದಾನೆ. ಅವನು ಬಡವರ ಜಮೀನನ್ನು ಅಕ್ರಮಿಸಿಕೊಳ್ಳಲು ಪ್ರಯತ್ನ ಮಾಡಿದಾಗ ಬಡವರು ತಿರುಗಿ ಬಿದ್ದಿದ್ದಾರೆಂದು ಕಾಣುತ್ತದೆ.

ಅಧ್ಯಕ್ಷರು.—ಇದು ಎರಡನೇ ಸಾರಿ ತಾವು ಹೇಳುತ್ತಿರುವುದು.

ಶ್ರೀ ವೈ. ಕೆ. ರಾಮಯ್ಯ.—ಅವರು ಹೇಳುತ್ತಿದ್ದರೆ ನಾನು ಹೇಳಬೇಕಲ್ಲ. ಅದಕ್ಕೆ ಮಾನ್ಯ ಬಂಗಾರಪ್ಪನವರನ್ನು ಕೇಳಿಕೊಳ್ಳುವುದು, ಯಾರ ಬಗ್ಗೆ ಏನಾದರೂ ಬಂದಾಗ ನಾವು ವಿಚಾರ ಮಾಡಿ ತಿಳಿದುಕೊಳ್ಳಬೇಕಾಗುತ್ತದೆ. ಆ ಊರಿನಲ್ಲಿ ಹೊಡೆದಿದ್ದಾರೆಂದು ನನ್ನ ಕ್ಷೇತ್ರಕ್ಕೆ ಬಂದು ಹೇಳಿದರು. ತಾನು ಏತಕ್ಕೆ ಎಂಥ ?

ಶ್ರೀ ವೈ. ಕೆ. ರಾಮಯ್ಯ.—ಹೊಡೆದಿದ್ದಾರೆಂದು ಹೇಳಿದರು. ನಾನು ಏತಕ್ಕೆ ಎಂದು ಕೇಳಿದಕ್ಕೆ ಜನತಾ ಪಕ್ಷದ ಕೆಲಸ ಮಾಡಿದ್ದಕ್ಕೆ ಹೊಡೆದ್ದಿದಾರೆಂದು ಹೇಳಿದರು. ಮಾನ್ಯ ಶಿವನಂಜಪ್ಪನವರು ನಾಟಕದಲ್ಲಿ ನಿಮ್ಮ ಹೆಸರನ್ನು ಪ್ರಿಂಟ್ ಮಾಡಿಕೊಂಡಿದ್ದಾರೆಂದು ಹೇಳಿದರು, ರಾಮಯ್ಯನವರೇ ಎಲ್ಲವನ್ನು ಮಾಡಿಸಿದ್ದು ಎಂದು ಹೇಳುತ್ತಾರೆ. ಅದಕ್ಕೋಸ್ಕರ ವಿರೋಧ ಪಕ್ಷದ ನಾಯಕರನ್ನು ಕೈ ಮುಗಿದು ಕೇಳಿಕೊಳ್ಳುತ್ತೇನೆ, ಅವರು ಹೇಳಿದ್ದನ್ನೇ ಕೇಳುವುದು ಬೇಡ, ಇರುವ ಪರಿಸ್ಥಿತಿಯನ್ನು ತಿಳಿದು ಮಾತನಾಡೋಣ. ಒಟ್ಟಿನಲ್ಲಿ ಆ ಘಟನೆಗೂ ನನಗೂ ನನಗೂ ಸಂಬಂಧ ಇಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.— ನಾನು ರಾಮಯ್ಯನವರನ್ನು ಕೇಳುವುದು ಇಷ್ಟೆ. ನಿಮ್ಮ ಹೆಸರನ್ನು ನಾಟಕಕ್ಕೆ ಪ್ರಿಂಟ್ ಮಾಡಿಸಿಕೊಂಡಿದ್ದಾರೆ. ಅದಕ್ಕೆ ನೀವು ಬರಬೇಡಿ ಎಂದು.

ಉಲ್ಲಾಳ ಕ್ಷೇತ್ರದ ಪಾವೂರಿನ ಮುಚ್ಚಿದ ಶಾಲೆಯನ್ನು ಪ್ರಾರಂಭಿಸುವುದು

ಶ್ರೀ ಬಿ. ಎಂ. ಇದ್ದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ನನ್ನ ಉಲ್ಲಾಳ ಕ್ಷೇತ್ರದ ಪಾವೂರು ಎಂಬಲ್ಲಿ ಎರಡು ವರ್ಷಗಳ ಹಿಂದೆ ಪ್ರಾಥಮಿಕ ಶಾಲೆ ಬಂದು ತೆರೆಯಲ್ಪಟ್ಟಿತ್ತು. ಕೆಲವೊಂದು ಕಾರಣಗಳಿಂದ ಆ ಶಾಲೆಯನ್ನು ಮುಚ್ಚಿ ಇಲ್ಲಿಗೆ ೧೦ ತಿಂಗಳಾಯಿತು. ಅಲ್ಲಿ ಈಗ ಶಿಕ್ಷಕರು ಇಲ್ಲದೆ ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲವಾಗಿದೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ, ಆದಷ್ಟು ಜರೂರಾಗಿ ಆ ಶಾಲೆಯನ್ನು ತೆರೆಯತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ರಾಜ್ಯ ಸಚಿವರು) — ಸ್ವಾಮಿ, ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಲ್ಲಾಳ ಕ್ಷೇತ್ರದ ಪಾವೂರು ಉಳಿಯ ಗ್ರಾಮದ ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನೇಮಕ ಮಾಡಲಾಗಿತ್ತು. ಆ ಶಿಕ್ಷಕರಿಗೂ ಊರಿನವರಿಗೂ ಹೊಂದಾಣಿಕೆ ಇಲ್ಲವಾದ್ದರಿಂದ ಶಿಕ್ಷಕರು ಬೇರೆ ಕಡೆಗೆ ವರ್ಗ ಮಾಡಿಸಿಕೊಂಡು ಹೋಗಿರುತ್ತಾರೆ, ಬೇರೆ ಶಿಕ್ಷಕರನ್ನು ನೇಮಿಸಿದ್ದಲ್ಲಿ ಆ ಶಾಲೆಗೆ ಹೋಗಲು ಹಿಂಜರಿಯುತ್ತಾರೆ. ಆದ್ದರಿಂದ ತಾತ್ಕಾಲಿಕವಾಗಿ ಒಬ್ಬ ಶಿಕ್ಷಕರನ್ನು ನಿಯೋಜಿಸುವಂತೆ ದಕ್ಷಿಣ ಕನ್ನಡ ಜಿಲ್ಲೆ ಉಪ ನಿರ್ದೇಶಕರಿಗೆ ತುರ್ತು ಸೂಚನೆ ನೀಡಲಾಗಿದೆ. ಅಲ್ಲದೆ ಜಿಲ್ಲಾ ನೇಮಕಾತಿ ಸಮಿತಿಯು ಉಪಾಧ್ಯಾಯರ ಆಯ್ಕೆಯ ಕೆಲಸ ಮುಗಿಸಿದ್ದು ನೇಮಕಾತಿಯನ್ನು ಮಾಡಲು ತ್ವರಿತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆಗ ತಪ್ಪದೆ ಈ ಊರಿಗೆ ಖಾಯಂ ಆಗಿ ಒಬ್ಬ ಶಿಕ್ಷಕರನ್ನು ನೇಮಿಸಲಾಗುವುದು.

ಶ್ರೀ ಬಿ. ಎಂ. ಇದ್ದಿನಬ್ಬ.—೧೦ ತಿಂಗಳಿನಿಂದ ಶಾಲೆ ಮುಚ್ಚಿ ಹೋಗಿದೆ. ವಿದ್ಯಾರ್ಥಿಗಳು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಶಾಲೆಯನ್ನು ತೆಗೆಯಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದಗೌಡ.—ಆದಷ್ಟು ಜರೂರಾಗಿ ಮಾಡುತ್ತೇವೆ, ಶಾಲೆ ಪುನಃ ಪ್ರಾರಂಭವಾಗುವ ದಿನ ಖಾಯಂ ಆದ ಉಪಾಧ್ಯಾಯರನ್ನು ಕಳುಹಿಸಿಕೊಡುತ್ತೇವೆ,